ಮೂಲ ದಾವಾ ಸಂಖ್ಯೆ. 111/2023                    ಪಿ ಡಬ್ಲ್ಯೂ  2

(ದಿನಾಂಕ 03-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ ಎನ್ ಕೆ  ವಕೀಲರಿಂದಃ-

ನಾನು ನನ್ನ ಚಿಕ್ಕ ವಯಸ್ಸಿನಿಂದಲೂ ಮಾಲವಿ ಗ್ರಾಮದಲ್ಲಿ ವಾಸವಾಗಿದ್ದೇನೆ. 1 ನೇ ವಾದಿ ನನಗೆ ತಮ್ಮ ಮತ್ತು 3 ನೇ ವಾದಿ ನನಗೆ ಸೊಸೆಯಾಗುತ್ತಾಳೆ. ದಾವಾ ಜಮೀನಿನ ಸರ್ವೆ ನಂಬರ್ 449 ಇರುತ್ತದೆ. ಅದು ಒಟ್ಟು 26 ಎಕರೆ ಇರುತ್ತದೆ. ದಾವಾಸ್ತಿಯನ್ನು ನಾವು ಖರೀದಿಗೆ ಪಡೆದಿದ್ದೇವೆ. ದಾವಾಸ್ತಿಯು ಮೂಲತಃ ಬಾಳೆನಹಳ್ಳಿಯವರದು ಇರುತ್ತದೆ. ಪ್ರತಿವಾದಿ ಜಮೀನು ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ಇದೆ. ಅಖಂಡಿ ಈರಮ್ಮ ಇವರ ಜಮೀನು ನಮ್ಮ ಜಮೀನಿನ ಪಶ್ಚಿಮಕ್ಕೆ ಇದೆ. ಅಖಂಡಿ ಈರಮ್ಮ ಇವರನ್ನು ಈ ದಾವೆಯಲ್ಲಿ ಪಕ್ಷಕಾರರು ಅಂತಾ ಮಾಡಿರುವುದಿಲ್ಲ. ಅಖಂಡಿ ಈರಮ್ಮರವರನ್ನು ಈ ದಾವೆಯಲ್ಲಿ ಸೇರಿಸಲು ನಿಮಗೆ ತೊಂದರೆ ಇದೆಯಾ ಎಂದರೆ ಸಾಕ್ಷಿಯು ಅವಳು ತನಗೆ ತೊಂದರೆ ಇದೆ ಅಂತಾ  ನಮ್ಮ ಜಮೀನಿಗೆ ಬರುತ್ತಾಳೆ. ಪ್ರತಿವಾದಿಯು ಯಾವುದೇ ಜಮೀನು ಒತ್ತುವರಿ ಮಾಡಿಲ್ಲವಾದರೂ ಅವರ ವಿರುದ್ಧ ಸುಳ್ಳು ದಾವೆ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ವಾದಪತ್ರ ಬರೆಯಲು ವಕೀಲರಿಗೆ ಮಾಹಿತಿಯನ್ನು ಸರ್ವೆಯರ್ ನೀಡಿರುತ್ತಾರೆ. ದಾವಾಸ್ತಿಯುನ ನಿಮ್ಮ ಹೆಸರಿಗೆ ಯಾವಾಗ ದಾಖಲಾಯಿತು ಎಂದರೆ ಬಹಳ ವರ್ಷವಾಯಿತು ಯಾವ ವರ್ಷವೆಂದು ನನಗೆ ಹೇಳಲು ಆಗುವುದಿಲ್ಲ. ದಾವಾಸ್ತಿಯನ್ನು ಹದ್ದುಬಸ್ತು ಮಾಡಲು ನಾನು ಪ್ರಯತ್ನಪಟ್ಟಿಲ್ಲ.

ದಾವಾಸ್ತಿಯು ಖಾತೆ ಮಾಡಿಸಿಕೊಳ್ಳುವ ಸಮಯದಲ್ಲಿ ಗಂಗಮ್ಮ ಇವರ ಹೆಸರು ಜಂಟಿಯಾಗಿತ್ತು ಎಂದರೆ ಸರಿ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ